5) ನೈಸರ್ಗಿಕ ಮರಳಿನ ಬದಲಾಗಿ ಉತ್ಪಾದಿತ ಮರಳನ್ನು ಉಪಯೋಗಿಸಲು ಉತ್ತೇಜನ ಕ್ರಮಗಳನ್ನು ಕೈಗೊಳ್ಳಲಾಗಿದೆ. (M-sand)

ಅಕ್ರಮ ಮರಳು ದಂಧೆ ಹಾಗೂ ಗಣಿಗಾರಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಬಯಲುಸೀಮೆ ಸಣ್ಣ ಹಿಡುವಳಿದಾರರಿಗೆ ಕೃಷಿ ಭಾಗ್ಯದ ಅನುಕೂಲಗಳು

665(1293); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಕೃಷಿ ಭಾಗ್ಯ ಯೋಜನೆ ಬಯಲು ಸೀಮೆಯ ಸಣ್ಣ ಹಿಡುವಳಿದಾರ ರೈತರಿಗೆ ವರದಾನವಾಗಲಿದೆ ಎಂಬುದು ನಿಜವೇ; ಹೌದಾದರೆ ಯಾವ ರೀತಿ ಅನುಕೂಲ ಇದೆ ವಿವರಿಸುವುದು;

ಆ) ಕೃಷಿ ಭಾಗ್ಯ ಯೋಜನೆಯಡಿ ಬಯಲು ಸೀಮೆ ಭಾಗದ ರೈತರಿಗೆ ಸಿಗುವ ಲಾಭ ಏನು; ಅದನ್ನು ಅವರು ಯಾವ ರೀತಿ ಪಡೆದುಕೊಳ್ಳಬೇಕು;

ಇ) ಚಿಕ್ಕಬಳ್ಳಾಪುರ ಜಿಲ್ಲೆ ಕೂಡ ಬಯಲು ಸೀಮೆ ಜಿಲ್ಲೆಯಾಗಿದ್ದು, ಬರಪೀಡಿತ ಜಿಲ್ಲೆಯಾಗಿದ್ದು, ಕೃಷಿ ಭಾಗ್ಯ ಯೋಜನೆಯಡಿ ವಿಶೇಷ ಸೌಕರ್ಯ ಸಿಗಲು ಸಾಧ್ಯವೇ;

ಈ) ಬಾಡಿಗೆ ಆಧಾರಿತ ಸೇವಾ ಕೇಂದ್ರಗಳು ಯಾವ ರೀತಿ ಕಾರ್ಯನಿರ್ವಹಿಸುತ್ತವೆ; ಇಲ್ಲಿ ಸಿಗುವ ಮಾಹಿತಿ ಏನು;

ಉ) ರಾಜ್ಯದಲ್ಲಿ ಎಲ್ಲೆಲ್ಲಿ ಈ ಕೇಂದ್ರಗಳು ಸ್ಥಾಪನೆಯಾಗಿವೆ; ಇನ್ನೆಷ್ಟು ಕೇಂದ್ರಗಳು ಮುಂದಿನ ಒಂದು ವರ್ಷದಲ್ಲಿ ಬರಲಿವೆ;

ಊ) ಕೃಷಿ ಭಾಗ್ಯ ಯೋಜನೆಯ ಕುರಿತು ಮಾಹಿತಿ ಪಡೆಯಲು ಯಾರನ್ನು ಸಂಪರ್ಕಿಸಬೇಕು?

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ಹೌದು. ಕೃಷಿ ಭಾಗ್ಯ ಯೋಜನೆ ಬಯಲು ಸೀಮೆಯ ಸಣ್ಣ ಹಿಡುವಳಿದಾರ ರೈತರಿಗೆ ವರದಾನವಾಗಲಿದೆ.

ರಾಜ್ಯದಲ್ಲಿ ಮಳೆಯಾಶ್ರಿತ ರೈತ ಸಮುದಾಯದ ಜೀವನೋಪಾಯವನ್ನು ಉತ್ತಮ ಪಡಿಸಲು ಕೃಷಿ ಭಾಗ್ಯ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಈ ಯೋಜನೆಯಲ್ಲಿ ಮಳೆನೀರಿನ ಸಂಗ್ರಹಣೆ, ಸಂರಕ್ಷಣೆ ಹಾಗೂ ಉಪಯುಕ್ತ ಬಳಕೆ, ಲಾಭದಾಯಕ ಬೆಳೆ ಪದ್ಧತಿ ಅಳವಡಿಕೆ, ಉತ್ತಮ ಆದಾಯ ತರುವ ತೋಟಗಾರಿಕೆ ಬೆಳೆಗಳು, ಪಶುಸಂಗೋಪನಾ ಚಟುವಟಿಕೆಗಳು, ಕೃಷಿ ವಲಯಕ್ಕೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡಲು ಉದ್ದೇಶಿಸಲಾಗಿದೆ. ಕೃಷಿ ಭಾಗ್ಯ ಯೋಜನೆಯನ್ನು ಅಭಿಯಾನ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಈ ಕೆಳಕಂಡ ಸೌಲಭ್ಯಗಳನ್ನು ಎಲ್ಲಾ ವರ್ಗದ ರೈತರು ಪಡೆಯಬಹುದಾಗಿದೆ.

ಮಳೆ ನೀರು ಸಂಗ್ರಹಣೆ ಮತ್ತು ಸಂರಕ್ಷಿತ ನೀರಾವರಿಗೆ ವಿಶೇಷ ಪ್ಯಾಕೇಜ್‌ನ ಘಟಕಗಳು:

1. ಸ್ಥಳದಲ್ಲಿಯೇ ಮಣ್ಣಿನ ತೇವಾಂಶ ಸಂರಕ್ಷಣೆ ಕ್ರಮಗಳು
2. ನೀರು ಸಂಗ್ರಹಣಾ ರಚನೆಗಳು [ಕೃಷಿ ಹೊಂಡ] (ಪಾಲಿಥೀನ್ ಸಹಿತ)
3. ನೀರು ಎತ್ತಲು ಡೀಸಲ್/ಸೋಲಾರ್ ಪಂಪ್‌ಸೆಟ್
4. ನೀರು ಹಾಯಿಸಲು ಲಘು ನೀರಾವರಿ ಘಟಕ
5. ಪರಿವರ್ತಿತ ಬೆಳೆ ಪದ್ಧತಿ ಪ್ರಾತ್ಯಕ್ಷತೆ
    ಅ) ಪಾಲಿಹೌಸ್ ಒಳಗೊಂಡಂತೆ ತೋಟಗಾರಿಕೆ ಬೆಳೆ ಪದ್ಧತಿ ಅಥವಾ
    ಆ) ಪಾಲಿಹೌಸ್ ರಹಿತ ಕೃಷಿ/ತೋಟಗಾರಿಕೆ ಬೆಳೆ ಪದ್ಧತಿ
6. ಪಶು ಸಂಗೋಪನಾ ಚಟುವಟಿಕೆಗಳು (ಐಚ್ಛಿಕ)

ಮೇಲ್ಕಂಡ ಪ್ಯಾಕೇಜ್‌ನ (ಕ್ರಮ ಸಂಖ್ಯೆ 6 ಹೊರತುಪಡಿಸಿ) ಎಲ್ಲ ಘಟಕಗಳು ಕಡ್ಡಾಯವಾಗಿರುತ್ತದೆ. ಈ ಯೋಜನೆಯಡಿಯಲ್ಲಿ ರೈತರಿಗೆ ವಿವಿಧ ಕೃಷಿ/ತೋಟಗಾರಿಕೆ ಬೆಳೆ ಪದ್ಧತಿಗಳನ್ನು ಮತ್ತು ನೀರು ಸಂಗ್ರಹಣಾ ರಚನೆಗಳನ್ನು [ಕೃಷಿ ಹೊಂಡ] ತಮ್ಮ ಕ್ಷೇತ್ರದ ಅನುಕೂಲತೆಗೆ ಅನುಗುಣವಾಗಿ ಆಯ್ಕೆ ಮಾಡಲು ಅವಕಾಶವಿರುತ್ತದೆ. ಪ್ಯಾಕೇಜ್ ಘಟಕಗಳಿಗೆ ಫಲಾನುಭವಿಗಳಿಗೆ ಸಹಾಯಾನುದಾನ ನೀಡಲಾಗುವುದು.

ಆ) ಮೇಲ್ಕಂಡ ಪ್ಯಾಕೇಜ್‌ನ ಎಲ್ಲ ಘಟಕಗಳಡಿ ಸಹಾಯಧನವನ್ನು ಫಲಾನುಭವಿಗಳು ಪಡೆಯಬಹುದಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಮಳೆ ಪ್ರಮಾಣದಲ್ಲಿ ಅನಿಶ್ಚಿತತೆ ಎದುರಿಸುತ್ತಿರುವುದರಿಂದ, ಬಿದ್ದ ಮಳೆಯ ನೀರನ್ನು ಸಂಗ್ರಹಣೆ ಮಾಡಿ, ಬೆಳೆಗಳ ಸಂಧಿಗ್ಧ ಪರಿಸ್ಥಿತಿಯಲ್ಲಿ ರಕ್ಷಣಾತ್ಮಕ ಕೃಷಿಯಿಂದ ಬೆಳೆಗಳ ಉತ್ಪಾದನೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಿ, ರೈತರ ಆದಾಯವನ್ನು ಹೆಚ್ಚಿಸಬಹುದಾಗಿದೆ.

ಈ ಯೋಜನೆಯಲ್ಲಿ ಜಿಲ್ಲೆಗಳಿಂದ ಒಂದು ನಿರ್ದಿಷ್ಟ ಕಾಲಮಿತಿ ನೀಡಿ ಆಸಕ್ತಿವುಳ್ಳ ರೈತರಿಂದ ಅರ್ಜಿ ಆಹ್ವಾನಿಸಿದಾಗ ಎಲ್ಲಾ ವರ್ಗದ ರೈತರು ನಿಗದಿ ಪಡಿಸಿರುವ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ರೈತರಿಗೆ ಗರಿಷ್ಠ 2 ಹೆಕ್ಟೇರ್‌ಗೆ ಸವಲತ್ತನ್ನು ಮಿತಿಗೊಳಿಸಲಾಗಿದೆ. 2014–15ನೇ ಸಾಲಿನಲ್ಲಿ ಪ್ರತಿ ತಾಲ್ಲೂಕಿಗೆ 200 ಪಾಲಿಹೌಸ್ ರಹಿತ ಹಾಗೂ 10 ಪಾಲಿಹೌಸ್ ಸಹಿತ ಪ್ಯಾಕೇಜ್ ಘಟಕಗಳಿಗೆ ಗುರಿ ನಿಗಧಿಪಡಿಸಲಾಗಿದ್ದು, ಫಲಾನುಭವಿಗಳನ್ನು ಲಾಟರಿ ಮುಖಾಂತರ ಆಯ್ಕೆ ಮಾಡಲಾಗಿದೆ. ಲಾಟರಿಯಲ್ಲಿ ಆಯ್ಕೆಯಾದ ರೈತರ ಕ್ಷೇತ್ರ ಸಮೀಕ್ಷೆ ನಡೆಸಿ ಸ್ಥಳ ಸೂಕ್ತತೆ ನಿರ್ಧರಿಸಲಾಗುತ್ತದೆ. ಮುಂದಿನ ಸಾಲಿನಲ್ಲಿ ಮತ್ತೆ ಅರ್ಜಿ ಆಹ್ವಾನಿಸಿದಾಗ ರೈತರು ಅರ್ಜಿ ಸಲ್ಲಿಸಬಹುದಾಗಿದೆ.

ಇ) ಕೃಷಿ ಭಾಗ್ಯ ಯೋಜನೆಯನ್ನು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಯೂ ಕೂಡ ಅನುಷ್ಠಾನಗೊಳಿಸಲಾಗುತ್ತಿದ್ದು, ಜಿಲ್ಲೆಯ ಎಲ್ಲಾ 6 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ) ರಾಜ್ಯದಲ್ಲಿ ಪ್ರತಿ ಹೋಬಳಿಗೆ ಒಂದರಂತೆ, 183 ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು 2014–15ನೇ ಸಾಲಿನಲ್ಲಿ ಸ್ಥಾಪಿಸಲಾಗುತ್ತಿದೆ.

- ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ಸ್ಥಾಪನೆಗೆ ನೊಂದಾಯಿತ ಚಾರಿಟೆಬಲ್ ಟ್ರಸ್ಟ್/ಸಂಸ್ಥೆ/ ಸರ್ಕಾರೇತರ ಸಂಸ್ಥೆಗಳ ಮುಖಾಂತರ ಸ್ಥಾಪಿಸಲು ಚಾರಿಟೇಬಲ್ ಟ್ರಸ್ಟ್/ಸಂಸ್ಥೆ/ಸರ್ಕಾರೇತರ ಸಂಸ್ಥೆಗಳ ಆಯ್ಕೆಗೆ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ "Expression of Interest" ಕರೆದು, 4 ಸಂಸ್ಥೆಗಳನ್ನು ಆಯ್ಕೆ ಮಾಡಿ ಕಾರ್ಯಾದೇಶ ನೀಡಲಾಗಿದೆ.

- ಸರ್ಕಾರವು ಪ್ರತಿ ಕೇಂದ್ರದ ಸ್ಥಾಪನೆಗಾಗಿ 75:25ರ ಅನುಪಾತದಲ್ಲಿ (ಸರ್ಕಾರದ ಪಾಲು ರೂ. 37.50 ಲಕ್ಷ ಸಂಸ್ಥೆಪಾಲು ರೂ. 12.5 ಲಕ್ಷ) ಸಹಾಯಧನವನ್ನು ಒದಗಿಸಲಾಗುತ್ತಿದೆ.

- ಜಿಲ್ಲಾ ಮಟ್ಟದಲ್ಲಿ ಯೋಜನೆಯ ಅನುಷ್ಠಾನ, ಉಸ್ತುವಾರಿ ಹಾಗೂ ಬಾಡಿಗೆ ದರ ನಿಗಧಿಪಡಿಸಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಆಯ್ಕೆಯಾದ 4 ಚಾರಿಟಬಲ್ ಟ್ರಸ್ಟ್/ ಸರ್ಕಾರೇತರ ಸಂಸ್ಥೆಯು ಇಲಾಖೆಯ ಸಹಯೋಗದೊಂದಿಗೆ ಸ್ಥಳೀಯವಾಗಿ ಬೆಳೆಯುವ ಬೆಳೆಗಳನ್ನು ಆಧರಿಸಿ ರೈತರಿಗೆ ಅವಶ್ಯವಿರುವ ಕೃಷಿ ಯಂತ್ರೋಪಕರಣಗಳ ಬಗ್ಗೆ ಪ್ರಾಥಮಿಕ ಸಮೀಕ್ಷೆ (ಬೆಂಚ್ ಮಾರ್ಕ ಸರ್ವೆ) ಕೈಗೊಂಡು, ರೈತರಿಗೆ

ಅವಶ್ಯವಿರುವ ಕೃಷಿ ಯಂತ್ರೋಪಕರಣಗಳನ್ನು ಪಟ್ಟಿ ಮಾಡಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸುವ ಅನುಷ್ಠಾನ ಮತ್ತು ಉಸ್ತುವಾರಿ ಸಮಿತಿಯ ಅನುಮೋದನೆ ಪಡೆದು, ಕೇಂದ್ರದಲ್ಲಿ ಕೃಷಿ ಉಂತ್ರೋಪಕರಣಗಳನ್ನು ದಾಸ್ತಾನು ಮಾಡಲಾಗುತ್ತಿದೆ.

- ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಕಡಿಮೆ ಬಾಡಿಗೆ ದರಗಳನ್ನು ನಿಗಧಿಪಡಿಸಿ ಕೃಷಿ ಯಂತ್ರೋಪಕರಣಗಳ ಸೇವೆಯನ್ನು ಒದಗಿಸಲಾಗುತ್ತಿದೆ.

ಊ) 2014–15ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ 183 ಹೋಬಳಿಗಳಲ್ಲಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ.

2015–16ನೇ ಸಾಲಿನಲ್ಲಿ 557 ಹೋಬಳಿಗಳಲ್ಲಿ ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿರುತ್ತದೆ.

ಋ) ಕೃಷಿ ಭಾಗ್ಯ ಯೋಜನೆಯ ಕುರಿತು ಮಾಹಿತಿ ಪಡೆಯಲು ಕೃಷಿ ಹಾಗೂ ಕೃಷಿ ಸಂಬಂಧಿತ ಇಲಾಖೆಗಳಲ್ಲಿನ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರಗಳ ಕೃಷಿ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

ಕೃಷಿ ಇಲಾಖೆಯಿಂದ ನೀಡುತ್ತಿರುವ ವಿಶೇಷ ಅನುದಾನ

666(1294); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಚಿಕ್ಕಬಳ್ಳಾಪುರ ಕೃಷಿ ಪ್ರಧಾನ ಹಾಗೂ ಹೊಸದಾಗಿ ನಿರ್ಮಾಣಗೊಂಡಿರುವ ಜಿಲ್ಲೆಯಾಗಿದ್ದು, ಇದರ ಕೃಷಿ ಪ್ರಗತಿಗೆ ಇಲಾಖೆಯಿಂದ ವಿಶೇಷ ಅನುದಾನ ಏನಾದರೂ ನೀಡಲಾಗುತ್ತಿದೆಯೇ; ನೀಡುತ್ತಿದ್ದರೆ ವಿವರ ನೀಡುವುದು;